(ಖಂಡ 2 ರಿಂದ 5ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ "1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು" ಎಂದು ಕೋರುತ್ತೇನೆ.

ಅಧ್ಯಕ್ಷರೆ : ಪ್ರಸ್ತಾವ ಏನೆಂದರೆ

"1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಬಿ.ಡಿ.ಎ. ಬಿಲ್‌ನ್ನು ತೆಗೆದುಕೊಳ್ಳೋಣ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನಿನ್ನೆ ಕಾನೂನು ಮಂತ್ರಿಗಳಾದ ಎಂ.ಸಿ. ನಾಣಯ್ಯನವರೇ, ಸದನದಲ್ಲಿ ಈ ಬಿಲ್‌ನ್ನು ಜೂನ್‌ನಲ್ಲಿ ಮಂಡಿಸುವುದಾಗಿ ಹೇಳಿದ್ದಾರೆ. ಈ ಬಿಲ್ ಪಾಸ್ ಮಾಡಿಸುವುದು ಅಷ್ಟೇನೂ ತುರ್ತಲ್ಲ.

ಅಧ್ಯಕ್ಷರು : ಸದನ ಕಲಾಪ ಸಮಿತಿ ಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇತರ ಮುಖಂಡರು ಬಿಲ್ ಪಾಸ್ ಮಾಡಿಸಲು ಒಪ್ಪಿಕೊಂಡಿದ್ದಾರೆ.

ಶ್ರೀ ಜೆ. ಸಿ. ಮಧುಸ್ವಾಮಿ : ಸನ್ಮಾನ್ಯ ಕಾನೂನು ಸಚಿವರು ಈ ಬಿಲ್‌ನ್ನು ಜೂನ್‌ನಲ್ಲಿ ರೀ-ಇಂಟ್ರಡ್ಯೂಸ್ ಮಾಡುವುದಾಗಿ ಮಾತು ಕೊಟ್ಟಿದ್ದಾರೆ. ಇದನ್ನು ಸದನದಲ್ಲಿಯೇ ಹೇಳಿದ್ದಾರೆ. ಹೀಗೆ ಹೇಳಿರುವಾಗ ಸಭೆಯ ಗೌರವ ಏನಾಗಬೇಕು? ಇನ್ನು ಇದರಲ್ಲಿ ತೀರ್ಮಾನ ಮಾಡುವುದು ನಿಮಗೆ ಬಿಟ್ಟಿದ್ದು.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಇದರ ಬಗ್ಗೆ ಚರ್ಚೆಯಾದಾಗ ಈ ಬಿಲ್‌ನಲ್ಲಿ ಕೆಲವು ಲೂಸ್ ಎಂಡ್ಸ್ ಇದೆ, ಆದಕಾರಣ ಅದಕ್ಕೆ ಸಂಬಂಧಪಟ್ಟಂತೆ ಇರಬೇಕಾದ ತಿದ್ದುಪಡಿಯನ್ನೂ ಕೂಡ ತರಬೇಕಾಗುತ್ತದೆಂದು ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಕೆಲವು ಮುಖಂಡರು ಹೇಳಿದರು. ಆಗ ಅದರ ಬಗ್ಗೆ ಅವರೊಡನೆ ಚರ್ಚೆ ಮಾಡಿಯೇ ತರುವುದಾಗಿ ಹೇಳಿ ಅದರಂತೆ ಈ ಬಿಲ್‌ನಲ್ಲಿ ಲೂಸ್ ಎಂಡ್ಸ್ ಯಾವುದು ಇದೆ ಅದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾಗಿ ಮಾಡಬೇಕು ಎಂಬುದಕ್ಕೆ ಸಂಬಂಧಪಟ್ಟಂತೆ ಎಲ್ಲರೂ ಒಪ್ಪಿದ ಮೇಲೆ ಸರ್ವಸಮ್ಮತವಾಗಿರುವಂತೆ ತಿದ್ದುಪಡಿಯನ್ನೇ ನಾವು ಈಗ ತಂದಿದ್ದೇವೆ.

ಶ್ರೀ ಜೆ. ಸಿ. ಮಧುಸ್ವಾಮಿ : ನಿನ್ನೆ ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಫ್ಲೋರ್ ಲೀಡರ್‌ಗಳನ್ನು ಕರೆಯುತ್ತೇವೆ ಎಂದಾಗ ಪ್ರಾಪರ್ಟಿ ಆಫ್ ದಿ ಹೌಸ್ ಎನ್ನಿಸಿಕೊಂಡಿರುವ ಬಿಲ್‌ನ್ನು ಹೊರಗೆ ತೆಗೆದುಕೊಂಡು ಹೋಗಿ ಚರ್ಚೆ ಮಾಡುವುದು ಸಾಧ್ಯವಿಲ್ಲವೆಂದು ಹೇಳಿದಾಗ ಕಾನೂನು ಮಂತ್ರಿಗಳು ಈ ಬಿಲ್‌ನ್ನು ಜೂನ್‌ನಲ್ಲಿ ತರುವುದಾಗಿ ಉತ್ತರ ಕೊಟ್ಟಿದ್ದಾರೆ. ಹೀಗಿರುವಾಗ whether Business Advisory Committee can pass such decisions? This is outside the purview of the Business Advisory Committee. Please don't allow such decisions to take place.

MR. SPEAKER : It is your opinion to say that it is outside the purview of the Business Advisory Committee. The Business Advisory Committee with its history and the convention or the House before us functions as a consensus of the entire House. It is a collective body. In the best of wisdom that prevail with the BAC, the Hon'ble Minister who is incharge of the portfolio was also called to the committee and his views were explained and it has been agreed upon that we would take up this matter. However, the Learned Leader of the opposition and his party are in the well of the House. They are on Dharana. There will be nothing like that they are getting back and coming in the way. Dharana becomes a kind of continuous protest. I do realise that the friends in the Congress Party would be in a very embarrassing situation if I take up this Bill for consideration now. I hope they would stand by the commitment they have made to the Chair and in order to save them from being embarrassed, I wold not take up the bill now. I would only appeal to the Hon'ble Member Sri. J.C.Madhuswamy, in view of the circumstances explained, we shall take up this bill for consideration on Staurday.

ಶ್ರೀ ಜೆ. ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನಿನ್ನೆ ಸದನದಲ್ಲಿಯೇ ಕಾನೂನು ಸಚಿವರು ಈ ಬಿಲ್‌ನ್ನು ಜೂನ್‌ನಲ್ಲಿ ತರುವುದಾಗಿ ಹೇಳಿದ್ದಾರೆ. ಈ ರೀತಿ ಹೇಳಿ ಹೊರಗಡೆ ಮತ್ತೆ ಬೇರೆ ತೀರ್ಮಾನ ತೆಗೆದುಕೊಳ್ಳುವುದು ಸರಿಯೇ?

ಅಧ್ಯಕ್ಷರು : ನಾನೂ ಕೂಡ ಸರ್ಕಾರದ ಅನುಕೂಲತೆಯನ್ನು ಗಮನಿಸಬೇಕಾಗುತ್ತದೆ. ಇದರಲ್ಲಿ

ಯಾವುದೇ ಸ್ವಾರ್ಥವಿಲ್ಲ. ಆಡಳಿತದ ದೃಷ್ಟಿಯಿಂದ ಈ ಬಿಲ್‌ನ್ನು ಪಾಸ್ ಮಾಡಿಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ತಮಗೂ ಕೂಡ ಇದರ ಬಗ್ಗೆ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಇದಲ್ಲದೆ ನೀವು ಇದಕ್ಕೆ ಸಂಬಂಧಪಟ್ಟಂತೆ ನಾಳಿದ್ದು ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆಯನ್ನೂ ಮಾಡಬಹುದು. ಏಕೆಂದರೆ ನೀವು ಸದನ ಕಲಾಪ ಸಮಿತಿಯಲ್ಲಿ ಸದಸ್ಯರಲ್ಲದ್ದರಿಂದ ನೀವು ನಾಳಿದ್ದು ಮಂತ್ರಿಗಳ ಜೊತೆ ಚರ್ಚೆ ಮಾಡಬಹುದು. ಆದಕಾರಣ ಸಧ್ಯಕ್ಕೆ ಈ ವಿಷಯವನ್ನು ಇಲ್ಲಿಗೇ ನಿಲ್ಲಿಸಿ ಇದನ್ನು ಮತ್ತೆ ಶನಿವಾರ ತೆಗೆದುಕೊಳ್ಳುತ್ತೇನೆ. ಈಗ ಒಂದು ಪ್ರಕಟಣೆ ಇದೆ.

12 ಪ್ರಕಟಣೆ

ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ವರದಕ್ಷಿಣೆ ಸಾವಿನ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿ, ಅಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಸಂಬಂಧಪಟ್ಟ ಕಾನೂನುಗಳಿಗೆ ಸೂಕ್ತ ತಿದ್ದುಪಡಿ ಹಾಗೂ ಅವುಗಳ ಯಶಸ್ವಿ ಅನುಷ್ಠಾನಕ್ಕೆ ಸಲಹೆ ಸೂಚನೆಗಳನ್ನು ನೀಡಲು ಹಾಗೂ ಈ ಮುಂದಿನ ಪರಿಶೀಲನಾಂಶಗಳನ್ನು ಪರಿಶೀಲಿಸಲು ಎಂದರೆ :

(ಎ) ಈಗ ಇರುವ ಪೊಲೀಸ್ ತನಿಖೆ, ವಿಚಾರಣೆ, ಮರಣ ಸಂದರ್ಭದಲ್ಲಿಯ ಹೇಳಿಕೆಗಳು, ನ್ಯಾಯಸಂಬಂಧಿತ ವಿಜ್ಞಾನ ಮತ್ತು ಔಷಧ ಹಾಗೂ ಅಭಿಯೋಗ ವ್ಯವಹರಣೆಗಳ ಸಂಬಂಧದಲ್ಲಿ ಅಧ್ಯಯನ ನಡೆಸಲು:

(ಬಿ) ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವುದಕ್ಕೆ ಕಾರಣವಾದ ಮೇಲ್ಕಂಡ ವ್ಯವಹರಣೆಗಳಲ್ಲಿಯ ಕುಂದುಕೊರತೆಗಳು ಹಾಗೂ ಲೋಪ-ದೋಷಗಳನ್ನು ಕಂಡುಹಿಡಿಯುವುದು ಮತ್ತು ಅಂಥ ಅಪರಾಧಗಳಲ್ಲಿ ಶಿಕ್ಷೆಯ ಪ್ರಮಾಣ ಹೆಚ್ಚಾಗುವಂತೆ ನೋಡಿಕೊಳ್ಳಲು ಸಾಧನೋಪಾಯಗಳನ್ನು ಸೂಚಿಸಲು:

(ಸಿ) ಸುಟ್ಟ ಮತ್ತು ವಿಷ ಸೇವನೆಯಂಥ ವಿಶೇಷ ಪ್ರಕರಣಗಳಲ್ಲಿ ಈಗ ಇರುವ ಮೂಲ ಸೌಲಭ್ಯಗಳನ್ನು ಮತ್ತು ಅಂಥ ವ್ಯವಸ್ಥೆ ನಿರ್ವಹಣೆಯ ಬಗ್ಗೆ ಅಧ್ಯಯನ ನಡೆಸುವುದು ಮತ್ತು ಕೌಟುಂಬಿಕ ಹಿಂಸೆಯ ಬಲಿಪಶುಗಳಾದ ಮಹಿಳೆಯರ ಶುಶ್ರೂಷೆಗಾಗಿ ಇರುವ ವೈದ್ಯಕೀಯ ಚಿಕಿತ್ಸೆ ಹಾಗೂ ಮೂಲ ಸೌಲಭ್ಯಗಳ ಸುಧಾರಣೆ ಸಲಹೆ ನೀಡಲು :

(ಡಿ) ಕೌಟುಂಬಿಕ ಹಿಂಸೆಯ ಬಲಿಪಶುಗಳಾದ ಮಹಿಳೆಯರಿಗೆ ಸಾಕಷ್ಟು ರಕ್ಷಣೆ ಒದಗಿಸುವುದಕ್ಕಾಗಿ ಅಗತ್ಯ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಲು:

ಈ ಕೆಳಕಂಡ ವಿಧಾನ ಸಭೆಯ 15 ಮಾನ್ಯ ಸದಸ್ಯರು ಹಾಗೂ ವಿಧಾನ ಪರಿಷತ್ತಿನ 5 ಮಾನ್ಯ ಸದಸ್ಯರುಗಳಿರುವ ಜಂಟಿ ಸದನ ಸಮಿತಿಗೆ ಒಪ್ಪಿಸಲಾಗಿದೆ.

ಈ ಸಮಿತಿಯು ತನ್ನ ವರದಿಯನ್ನು ಎಂಟು ವಾರದೊಳಗಾಗಿ ನೀಡತಕ್ಕದ್ದು.

ಶ್ರೀಯುತರುಗಳಾದ :

1. ಕೆ.ಎಸ್.ಪುಟ್ಟಣಯ್ಯ
2. ಜೆ.ಪಿ. ಶ್ರೀರಾಮರೆಡ್ಡಿ